# ಪ್ರಜಾ ಮಾಹಿತಿ

(ಮಾಹಿತಿ ಹಕ್ಕು ವಿಷಯಕ್ಕೆ ಮೀಸಲಾದ ತ್ರೈಮಾಸಿಕ)

CREAT BANGALORE

ಸಂಖ್ಯೆ-1/2008 ಜನವರಿ-ಮಾರ್ಚ್-2008


## ಮಾಹಿತಿ ಹಕ್ಕು ಕಾಯ್ದೆ ಬಳಸಿದರೂ ಅಪಾಯ!

**ಸ್ವಾ**ತಂತ್ರ್ಯ ಬಂದ ನಂತರ ಭಾರತ ಕಂಡ ಒಂದು ಅಪರೂಪದ ಕಾಯ್ದೆ ಈ ಮಾಹಿತಿ ಹಕ್ಕು ಕಾಯ್ದೆ. ಇದು ಜಾರಿಗೆ ಬಂದ ನಂತರ ಇದರ ಬಳಕೆ ಹಾಗೂ ಲಾಭಗಳ ಬಗ್ಗೆ ಇನ್ನಿಲ್ಲದ



ಚರ್ಚೆ ಆಗುತ್ತಿರುವುದಂತೂ ನಿಜ. ಮಾಹಿತಿ ಹಕ್ಕು ಕಾಯ್ದೆ ಉತ್ತಮ ಸರ್ಕಾರದ ಕಲ್ಪನೆ ಸಾಕಾರಗೊಳ್ಳಲು ಸಿಕ್ಕಿರುವ ಅಸ್ತ್ರ ಎನ್ನುವವರೂ ಇದ್ದಾರೆ. ಮೂಲ ಭೂತವಾಗಿ ಮಾಹಿತಿ ಕಾಯ್ದೆಗೂ ಎರಡು ಮುಖಗಳಿವೆ. ಆ ಮಟ್ಟಿಗೆ ಇದರ ಯಶಸ್ಸು ಎಕನಾಮಿಕ್ಸ್‌ನ ಸೂತ್ರವೊಂದನ್ನು ಆಧರಿಸಿದೆ. ಅಂದರೆ ಮಾಹಿತಿ ಹಕ್ಕು ಕಾಯ್ದೆಯ ಸಫಲತೆಯು ಬೇಡಿಕೆ ಮತ್ತು ಸರಬರಾಜು ನೀತಿಯನ್ನು ಅನುಸರಿಸುತ್ತದೆ. ಮಾಹಿತಿ ಕೇಳುವವರಷ್ಟೇ ಒದಗಿಸುವವರು ಇರಬೇಕು. ದೇಶದ ವಿವಿದೆಡೆಯಿಂದ ಬಂದ ವರದಿಗಳನ್ನು ಉಲ್ಲೇಖಿಸಿ ಹೇಳುವುದಾದರೆ, ಮಾಹಿತಿ ಸರಬರಾಜಿನ ಕೆಲಸದಲ್ಲೇ ಸಮಸ್ಯೆ.

ಅಷ್ಟೇಕೆ, ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಅರ್ಜಿದಾರರನ್ನು ಹೆದರಿಸಿದ ಪ್ರಕರಣಗಳು ವರದಿಯಾಗಿವೆ. ಕೆಲವು ಪ್ರಕರಣಗಳಲ್ಲಿ ಮಾಹಿತಿ ಅರ್ಜಿದಾರರನ್ನು ದೈಹಿಕವಾಗಿ ತಳಿಸಿದ ಪ್ರಸಂಗಗಳಿವೆ! ಹಾವೇರಿ ಜಿಲ್ಲೆಯ ರಾಣಿಬೆನ್ನೂರಿನ ಪತ್ರಕರ್ತ ಹಾಗೂ ಆರ್‌ಟಿಐ ಕಾರ್ಯಕರ್ತ ಶ್ರೀ ಜೆ.ಎಮ್.ರಾಜ ಶೇಖರ್‌ರ ಪ್ರಕರಣ ವನ್ನೇ ಗಮನಿಸಿ. ಅವರು ಉತ್ತರ ವಲಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಮಾಹಿತಿ ಕಾಯ್ದೆಯಡಿ ಕೆಲವು ತುಂಬಾ ಸಾಮಾನ್ಯವಾದ ಮಾಹಿತಿಗಳನ್ನು ಕೋರಿದರು. ಮಾಹಿತಿ ಕೊಡುವುದು ಬಿಡಿ, ಆ ನಿಗಮ ವಕೀಲರ ಮೂಲಕ ರಾಜಶೇಖರ್‌ರಿಗೆ ಕಾನೂನು ಕ್ರಮದ ಬೆದರಿಕೆ ಒಡ್ಡಿ ನೋಟೀಸ್ ಜಾರಿಗೊಳಿಸಿತು! ಮುಂದಿನ ಪರಿಣಾಮಗಳನ್ನು ಎದುರಿಸುವಂತೆ ಹಾಗೂ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದಕ್ಕೆ ಎರಡು ಸಾವಿರ ರೂಪಾಯಿ ಖರ್ಚು ಪಾವತಿಸುವಂತೆ ಸೂಚಿಸಿತು.

ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಶ್ರೀ ಮಂಜುನಾಥ ರೆಡ್ಡಿ ಜನ ಜಾಗೃತಿ ವೇದಿಕೆ ಎಂಬ ಸಾರ್ವಜನಿಕ ಸಂಘಟನೆಯನ್ನು ನಡೆಸುತ್ತಾರೆ. ಅಲ್ಲಿನ ಡಾಂಬರೀಕರಣಗೊಂಡ ರಸ್ತೆ ಯೊಂದರ ಗುಣಮಟ್ಟ ಕಳಪೆ ಎನ್ನಿಸಿದ್ದರಿಂದ ಅವರು ಮಾಹಿತಿ ಹಕ್ಕಿನಡಿ ಸಂಬಂಧಿತ ಏಜೆನ್ಸಿಯಿಂದ ಮಾಹಿತಿ ಕೋರಿದರು. ಅರ್ಜಿ ಮೂಲಕ ಅವರು ಕೆಲಸವನ್ನು ಪರೀಕ್ಷಿಸಲು ಒತ್ತಾಯಿಸಿದರು. ಗುಣಮಟ್ಟ ಪರೀಕ್ಷಕರು ಪರಿಶೀಲಿಸಲಾಗಿ, ಯೋಜಿತ ಎರಡು ಲಕ್ಷದ ಕೆಲಸ ಆಗಿರಲಿಲ್ಲ. ಆದರೆ ಗುತ್ತಿಗೆದಾರರಿಗೆ ಆ ಮೊತ್ತ ಪಾವತಿಯಾಗಿತ್ತು! ಗುತ್ತಿಗೆದಾರರು ಗೂಂಡಾಗಳ ನೆರವು ಪಡೆದು ಕ್ವಾಲಿಟಿ ಕಂಟ್ರೋಲರ್‌ನ ಎದುರೇ ಮಂಜುನಾಥ್ ರಿಗೆ ಥಳಿಸಿದರು. ಬಟ್ಟೆ ಹರಿದು ದೈಹಿಕ ಧಾಳಿ ನಡೆಸಲಾಯಿತು. ಅದೃಷ್ಟಕ್ಕೆ, ಆ ಅಧಿಕಾರಿಗೆ ರಸ್ತೆ ಕಾಮಗಾರಿಯ ಕಳಪೆತನ ಮನದಟ್ಟಾಗಿತ್ತು. ಹಾಗಾಗಿ ಆತ ಪುನರ್ ಕೆಲಸಕ್ಕೆ ಆದೇಶಿಸಿದ.

ಇನ್ನೊಂದು ಪ್ರಕರಣದಲ್ಲಿ ಮೈಸೂರಿನ ಶ್ರೀ ಪರಮ ಶಿವಮೂರ್ತಿಯವರನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯೇ ದೈಹಿಕ ಹಲ್ಲೆ ನಡೆಸಿದ್ದರು. ಅರ್ಜಿದಾರರು ಮೈಸೂರಿನ ವರುಣ ಚಾನೆಲ್ ಯೋಜನೆಯ ಕೆಲಸದ ವಿವರ ಕೇಳಿದ್ದರು. ಪರಮಶಿವಮೂರ್ತಿ ಕೆಲಸ ಮಾಡುವ ಸ್ಥಳದಲ್ಲಿಯೇ ಆತ ಮತ್ತು ಆತನ ಬೆಂಬಲಿಗರು ಮೈಮೇಲೆ ಎರಗಿದ್ದರು. ಬೆಂಗಳೂರಿನ ಮಾಹಿತಿ ಹಕ್ಕು ಕಾರ್ಯಕರ್ತ ಶ್ರೀ ರವೀಂದ್ರನಾಥ ಗುರುರವರ ಸ್ಥಿತಿ ಇನ್ನೂ ಹೀನಾಯವಾಗಿತ್ತು. ಇವರ ನೆರೆಮನೆಯಾತ ಕಟ್ಟಡ ನಿರ್ಮಾಣ ಕಾನೂನುಗಳನ್ನು ಮುರಿದು ವಸತಿ ಉದ್ದೇಶದ ನಿವೇಶನದಲ್ಲಿ ವ್ಯಾಪಾರಿ ಸಂಕೀರ್ಣ ಕಟ್ಟಿದ್ದರು. ಈ ಬಗ್ಗೆ ಗುರು ಮಾಹಿತಿ ಹಕ್ಕು ಕಾಯ್ದೆ ಬಳಸಿ ಅಗತ್ಯ ದಾಖಲೆಗಳೆಲ್ಲವನ್ನೂ ಸಂಗ್ರಹಿಸಿದ್ದರು. ಮರುದಿನ ಮಧ್ಯರಾತ್ರಿ ರವೀಂದ್ರನಾಥ್‌ರ ಮನೆಯ ಮೇಲೆ ಧಾಳಿ

ಪುಟ–3 ನೋಡಿ >>

### ಮಾಹಿತಿ ಅರ್ಜಿಗಳ ಸ್ಥಿತಿ ಗತಿ

2006ರ ಸೆಪ್ಟೆಂಬರ್ 8ಕ್ಕೆ ಅನ್ವಯಿಸುವಂತೆ ಹಿಂದಿನ ಒಂದು ವರ್ಷದಲ್ಲಿ ಕೇಂದ್ರ ಮಾಹಿತಿ ಆಯೋಗ (ಸಿಐಸಿ) 3059



ಅರ್ಜಿಗಳನ್ನು ಸ್ವೀಕರಿಸಿದೆ. ಇವುಗಳಲ್ಲಿ 1531 ಪ್ರಕರಣಗಳು ಮಾತ್ರ ಇತ್ಯರ್ಥವಾಗಿವೆ. ಪ್ರಕರಣಗಳು ಇತ್ಯರ್ಥಕ್ಕೆ 72ರಿಂದ 195 ದಿನ ತೆಗೆದುಕೊಂಡಿದ್ದವು.

<< ಮುಂದಿನ ಪುಟದಲ್ಲಿ >>


- ಮಹಾರಾಷ್ಟ್ರದಲ್ಲಿ ಆರ್‌ಟಿಐ ಜಾಗೃತಿ
- ಸಾರ್ವಜನಿಕ ಪ್ರಾಧಿಕಾರಗಳಿಗೆ ಹತ್ತು ಸಲಹೆ
- ಮಾಹಿತಿ ಕಾಯ್ದೆ– ಕಾರ್ಯಾಚರಣೆಗೆ ಹೆಜ್ಜೆಗಳು
- ಪಾಸ್‌ಪೋರ್ಟ್ ಅಧಿಕಾರಿಗೆ ದಂಡ

## ಅಧಿಕಾರಿಗೆ ದಂಡ- ದಾಖಲೆ!

ಕೆ.ಡಿ.ಬನ್ಸೂರ್ ಎಂಬುವವರು ಒಂದು ವಿಚಿತ್ರ ದಾಖಲೆಯ ಒಡೆಯರಾಗಿದ್ದಾರೆ! ಮಾಹಿತಿ ಕಾಯ್ದೆಯ ನಿಯಮ ಮೀರಿದ್ದಕ್ಕೆ ದಂಡ ತೆತ್ತ ಪ್ರಪ್ರಥಮ ಕೇಂದ್ರ ಸರ್ಕಾರಿ ಅಧಿಕಾರಿಯಾದ ವಿಶಿಷ್ಟ ದಾಖಲೆ ಅವರದ್ದು.



ಅಧಿಸೂಚಿತ ಜಾತಿ,ಬುಡಕಟ್ಟಿನ ರಾಷ್ಟ್ರೀಯ ಆಯೋಗದ ಅಧೀನ ಕಾರ್ಯದರ್ಶಿ ಹಾಗೂ ಹೆಚ್ಚುವರಿ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುವ ಶ್ರೀಮತಿ ಬನ್ಸೂರ್ ಕೇಳಿದ ಮಾಹಿತಿ ಕೊಡುವಲ್ಲಿ ತಡ ಮಾಡಿರುವುದು ಮತ್ತು ಅರ್ಜಿದಾರರನ್ನು ಕಿರುಕುಳಕ್ಕೆ ಈಡುಮಾಡಿರುವುದು ಕೇಂದ್ರ ಮಾಹಿತಿ ಆಯೋಗದ ಗಮನಕ್ಕೆ ಬಂದಿತು. ಅದು ಬನ್ಸೂರ್‌ರಿಗೆ ತಮ್ಮ ವೇತನದಲ್ಲಿ 12,500 ರೂ. ದಂಡ ಕಟ್ಟಲು ಸೂಚಿಸಿತು.

**[ಮೂಲ: ಆರ್‌ಟಿಐ ಟೈಮ್ಸ್, ಸಂಚಿಕೆ1]**

## ಮಾಹಿತಿ ಹಕ್ಕು ಕಾಯ್ದೆ- ಸಚಿವರ ಅರ್ಜಿ!



ಇದು ಅಚ್ಚರಿ ಹುಟ್ಟಿಸುವ ಸುದ್ದಿಯಾದರೂ ಸತ್ಯ. ಬಹುಷಃ ಭಾರತದಲ್ಲಿ ಮೊದಲ ಬಾರಿಗೆ ಸಚಿವರೊಬ್ಬರು ಮಾಹಿತಿ ಕಾಯ್ದೆಯಡಿ ಅರ್ಜಿ ಸಲ್ಲಿಸಿದ ಘಟನೆ ನಡೆದಿದೆ. ಈ ಖ್ಯಾತಿಗೆ ಪಾತ್ರರಾಗಬೇಕಾದವರು ಮಹಾರಾಷ್ಟ್ರದ ರಾಜ್ಯ ಸರ್ಕಾರದ ಸಚಿವ ಶ್ರೀ ಧರ್ಮರಾವ್ ಬಾಬಾ ಅತ್ರಮ್. ಆರ್‌ಟಿಐಎ ಬಳಸಿ ಈ ಸಾರಿಗೆ ಇಲಾಖೆ ರಾಜ್ಯಸಚಿವರು ಪಡೆದಿದ್ದಾದರೂ ಏನು? ತಮ್ಮದೇ ಖಾತೆಗೆ ಸಂಬಂಧಿಸಿದ ಅಧಿಕಾರಿಗಳ ವರ್ಗಾವಣೆ ವಿವರ! ಆಗಿದ್ದೇನು? ಅವರ ಗಮನಕ್ಕೆ ಬಾರದೆ ಇಲಾಖೆಯಲ್ಲಿ ಗಡಿಬಿಡಿಯ ವರ್ಗಾವಣೆಗಳಾದವು. ಅಧಿಕಾರಿಶಾಹಿ ಗೌರವಾನ್ವಿತ ಸಚಿವರು ಕೇಳಿದರೂ ವಿವರ ನೀಡಲಿಲ್ಲ. ಹೀಗಾಗಿ 2006ರ ನವೆಂಬರ್‌ನಲ್ಲಿ ಮುಖ್ಯ ಮಾಹಿತಿ ಆಯುಕ್ತರಿಗೆ ಅರ್ಜಿ ಸಲ್ಲಿಸಿ ಮಾಹಿತಿ ಕೇಳಿಯೇಬಿಟ್ಟರು. ಅಲ್ಲದೆ ಸಾರಿಗೆ ಆಯುಕ್ತರು ತಮಗೆ ವರದಿ ಮಾಡಬೇಕಿದ್ದರೂ ತಮ್ಮನ್ನು ನಿರ್ಲಕ್ಷಿಸುತ್ತಿದ್ದಾರೆ. ಸಂದರ್ಭಗಳನ್ನು ವಿವರಿಸದೆ ತಮಗೆ ತೋಚಿದ ಕ್ರಮ ಕೈಗೊಳ್ಳುತ್ತಿದ್ದಾರೆ ಎಂದೂ ಸಚಿವ ಧರ್ಮರಾವ್ ಆಯುಕ್ತರಲ್ಲಿ ದೂರಿದ್ದರು!

**[ಮೂಲ : ಮುಂಬೈ ಮಿರರ್]**

# ಸಾರ್ವಜನಿಕ ಪ್ರಾಧಿಕಾರಗಳಿಗೆ ಕೆಲವು ಸಲಹೆ

**ಮಾ**ಹಿತಿ ಹಕ್ಕಿನ ಪರಿಣಾಮಕಾರಿ ಜಾರಿಗೆ ಎರಡು ಅಂಶ ಮುಖ್ಯವೆನಿಸುತ್ತದೆ. ಸಾರ್ವಜನಿಕ ಪ್ರಾಧಿಕಾರಗಳು ಕೈಗೊಂಡ ಸಿದ್ಧತೆ ಹಾಗೂ ಅವು ಕಾಯ್ದೆಯ ಜಾರಿಗೆ ನೇಮಿಸಿದ ಅಧಿಕಾರಿಗಳು. ಕಾಯ್ದೆ ಕೆಲವು ಕರ್ತವ್ಯಗಳು ಮತ್ತು ಸೇವೆಗಳನ್ನು ಶಿಫಾರಸು ಮಾಡಿದೆ.




ಆದಾಗ್ಯೂ ಅಧಿಕಾರಿಗಳ ಪೂರಕ ವರ್ತನೆ ಇದ್ದಲ್ಲಿ ಮಾತ್ರ ಗಮನೀಯ ಬದಲಾವಣೆ ತಂದೀತು. ಕಾನೂನಿನ ಅಗತ್ಯದಂತೆ ವರ್ತಿಸುವುದರ ಜೊತೆಗೆ ಆರ್‌ಟಿಐಎ ಸಾರ್ವಜನಿಕ ಅಧಿಕಾರಿಗಳು ಪಾರದರ್ಶಕತೆಯ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಬಹುಷಃ ಕೆಳಗೆ ಒದಗಿಸಿರುವ, ಇಂಗ್ಲೆಂಡ್‌ನ ಸಾರ್ವಜನಿಕ ಆಯುಕ್ತರ ಕಛೇರಿ ಅನುಸರಿಸುವ ಹತ್ತು ಅಂಶಗಳು ನಮ್ಮಲ್ಲೂ ಇರುವ ಸಾರ್ವಜನಿಕ ಪ್ರಾಧಿಕಾರಗಳಿಗೆ ಅನುಕೂಲವಾದೀತು.

### ಧನಾತ್ಮಕವಾಗಿ

ಹೆಚ್ಚಿನ ಪಾರದರ್ಶಕತೆ ಸಾರ್ವಜನಿಕರಿಗೂ, ಪ್ರಜಾಪ್ರಭುತ್ವಕ್ಕೂ ಒಳ್ಳೆಯದು.

### ಕ್ರಿಯಾಶೀಲವಾಗಿ

ಪ್ರಕಟನೆಯ ಯೋಜನೆಗಳು ಕ್ರಿಯಾಶೀಲತೆಯ ಪರವಿರಲಿ. ಇಂತಹ ಪ್ರಕಟನೆಗಳು ಸಮಯ, ಶ್ರಮ, ಸಂಪನ್ಮೂಲ ಮತ್ತು ಹಣವನ್ನು ಉಳಿಸಿಕೊಡುತ್ತವೆ.

### ವಿನಂತಿ ನಿರೀಕ್ಷೆ

ಪ್ರಶ್ನೆ ಕೇಳುವವರೆಗೆ ಕಾಯದಿರಿ.

ಏಕೆ? ಮಾಹಿತಿ ಕಾಯ್ದೆ ಬಹಿರಂಗವನ್ನು ಉತ್ತೇಜಿಸುವಂತದು. ಹಾಗಾಗಿ ಸಾರ್ವಜನಿಕ ಪ್ರಾಧಿಕಾರಗಳು ಜನರ ಮಾಹಿತಿ ಬೇಡಿಕೆಯನ್ನು ಪೂರೈಸಲೇ ಬೇಕು. ಕಾಯ್ದೆಯೇ ಹೇಳಿದ್ದಲ್ಲಿ ಮಾತ್ರ ಮಾಹಿತಿ ಬಹಿರಂಗಕ್ಕೆ ನಿರಾಕರಿಸಬಹುದಷ್ಟೆ.

### ಮಾತನಾಡಿ

ಮಾಹಿತಿ ಆಶಿಸಿದವ ಹಾಗೂ ಸಾರ್ವಜನಿಕ ಪ್ರಾಧಿಕಾರದ ಅಧಿಕಾರಿ ಈ ಬಗ್ಗೆ ಸಂಭಾಷಿಸುವುದು ತಪ್ಪಲ್ಲ. ಎಷ್ಟೋ ಬಾರಿ ಶೀಘ್ರ ಇತ್ಯರ್ಥಕ್ಕೆ ಸಹಕಾರಿ.

### ಸಂಪ್ರದಾಯದ ಭಯ ಸಲ್ಲ

ಎಲ್ಲ ತೀರ್ಮಾನಗಳು ಆಯಾ ಅರ್ಜಿಯ ಅಗತ್ಯಕ್ಕೆ ತಕ್ಕಂತಿರಬೇಕೇ ವಿನಃ ಯಾವುದೋ ಹಿಂದಿನ ನಡಾವಳಿಯ ಆಧಾರಕ್ಕೆ ಅನುಸಾರವಾಗಿರಬೇಕಾದುದಿಲ್ಲ.

### ಸ್ಪಷ್ಟ ಕಾರಣ ಕೊಡಿ

ಮಾಹಿತಿ ನಿರಾಕರಿಸುವ ಸನ್ನಿವೇಶದಲ್ಲಿ ಅದಕ್ಕೆ ಸ್ಪಷ್ಟ ಕಾರಣ ಕೊಟ್ಟು ನಿರಾಕರಣ ಪತ್ರ ಅಥವಾ ನೋಟೀಸ್ ಜಾರಿಗೊಳಿಸಿ. ಸಮರ್ಪಕವಾಗಿ ಬರೆದ, ನಿರಾಕರಣೆಯ ಕಾರಣಗಳನ್ನು ವಿಷದವಾಗಿ ಒದಗಿಸಿದ ಸಂದರ್ಭದಲ್ಲಿ ಮೇಲ್ಮನವಿ ಮತ್ತು ದೂರುಗಳನ್ನು ತಪ್ಪಿಸಬಹುದು.

### ಸಹಕಾರಿಯೇ, ಇನ್ನಷ್ಟು ವಿವರ ನೀಡಿ

ಕೇಳಿದ ಮಾಹಿತಿಯ ಸ್ಪಷ್ಟತೆಗಾಗಿ, ಅರ್ಜಿದಾರನಿಗೆ ಅನುಕೂಲವಾಗುವಂತಿದ್ದರೆ ಹೆಚ್ಚುವರಿ ಮಾಹಿತಿ ಒದಗಿಸಿ.

### ಸಮಯ ಮಿತಿಯನ್ನು ಸೋಲಿಸಿ

ಮಾಹಿತಿ ನೀಡಲು ಇರುವ 30 ದಿನಗಳ ಸಮಯಮಿತಿಯನ್ನು ಅನುಸರಿಸುವುದು ಒಂದು ಕ್ರಮ. ಸಾಧ್ಯವಾಗುವುದಾದರೆ ಅದಕ್ಕಿಂತ ಮುಂಚಿತವಾಗಿಯೇ ಮಾಹಿತಿ ನೀಡಿ ಆ ಸಮಯಮಿತಿ ಕಾನೂನನ್ನೇ ಸೋಲಿಸಿ!

### ನೀವು ತಜ್ಞರಾಗಿ

ಮಾಹಿತಿ ಹಕ್ಕು ಕಾಯ್ದೆಯ ವಿವರ ಗೊತ್ತಿರಲಿ. ಹಾಗೆಯೇ ಆಯೋಗಗಳ ತೀರ್ಮಾನಗಳು ಮತ್ತು ಇತರ ಅನುಕೂಲಕರ ವೆಬ್‌ಸೈಟ್‌ಗಳಿಂದಲೂ ಮಾಹಿತಿ ಪಡೆದು ನೀವೂ ತಜ್ಞರಾಗಿ.

ಪುಟ–1ರಿಂದ >> ಕಾಯ್ದೆ ಬಳಸಿದರೂ ಅಪಾಯ!

ನಡೆಯಿತು. ಕಲ್ಲು ತೂರಿದರು. ಕಿಟಕಿ, ಗಾಜಿನ ಬಾಗಿಲುಗಳೆಲ್ಲ ಧ್ವಂಸ ಗೊಂಡವು. ಇದರ ಹಿಂದೆ ರಾಜಕಾರಣಿ ಗಳ ಕೈವಾಡ ಇರುವ ಶಂಕೆಯೂ ಇತ್ತು.

ಮಾಹಿತಿ ಕಾಯ್ದೆಯನ್ವಯ ಮಾಹಿತಿ ಕೇಳಿದ್ದಕ್ಕೆ ಸಾರ್ವಜನಿಕ ಮಾಹಿತಿ ಅಧಿಕಾರಿ ಕಾರಣ ಕೇಳುವಂತಿಲ್ಲ. ಲಿಖಿತವಾಗಿ ಪಿಐಒಗಳು ಕಾರಣವನ್ನು ಆರ್‌ಟಿಐ ಅರ್ಜಿದಾರರಿಂದ ಕೇಳುತ್ತಿಲ್ಲವಾದರೂ ಮೌಖಿಕವಾಗಿ ಕಾರಣಕ್ಕೆ ಒತ್ತಾಯಿಸುತ್ತಿದ್ದಾರೆ. ಕೆಲವೊಮ್ಮೆ ಅರ್ಜಿದಾರರ ಯೋಗ್ಯತೆಯನ್ನು ಪರೋಕ್ಷವಾಗಿ ಪ್ರಶ್ನಿಸುವುದೂ ಇದೆ. ಮೈಸೂರು ಜಿಲ್ಲಾ ಮಾಹಿತಿ ವೇದಿಕೆ(ಆರ್‌ಟಿಐ ಸಂಘಟನೆ)ಯ ಶ್ರೀಮತಿ ಸವಿತಾ ರಂಗನಾಥ್ ಮೈಸೂರಿನ ಕೆಆರ್ ಆಸ್ಪತ್ರೆಯ ಡಾಕ್ಟರೊಬ್ಬರ ಚಲನವಲನದ ದಾಖಲೆ ಪ್ರತಿ ಒದಗಿಸುವಂತೆ ಅರ್ಜಿ ಸಲ್ಲಿಸಿದ್ದರು. ಡಾಕ್ಟರ್ ಮಾಹಿತಿ ಕೊಡಲು ಅರ್ಜಿದಾರರೇ ಖುದ್ದು ಹಾಜರಿರಬೇಕೆಂದು ಸೂಚಿಸಿದರು. ಆ ಮಹಿಳೆ ಮಾಹಿತಿ ಪಡೆಯಲು ಮಧ್ಯಾಹ್ನದಿಂದ ಸಂಜೆಯವರೆಗೆ ಸುಖಾಸುಮ್ಮನೆ ಕಾಯಬೇಕಾಯಿತು.

ಪಿಐಒಗಳ ವಿಚಾರ ಬಿಟ್ಟುಬಿಡೋಣ. ಇವರ ಅಥವಾ ಸಾರ್ವಜನಿಕ ಪ್ರಾಧಿಕಾರದ ಪರವಾಗಿ ಮಾಹಿತಿ ಆಯೋಗದ ಮುಂದೆ ಹಾಜರಾಗುವ ವಕೀಲರು ತಮ್ಮ ಎಂದಿನ ಕಾನೂನು ಭಾಷೆಯನ್ನು ಒಡ್ಡುತ್ತಿದ್ದಾರೆ. ಬೆಂಗಳೂರಿನ ಭ್ರಷ್ಟಾಚಾರ ವಿರೋಧಿ ವೇದಿಕೆಯ ಶ್ರೀ ವೀರೇಶ್ ಮಾಹಿತಿ ಹಕ್ಕು ಕಾಯ್ದೆ ಉಪಯೋಗಿಸಿ ಮಾಹಿತಿ ಸಂಗ್ರಹಿಸುವ ಸಕ್ರಿಯರು. ವಾಸ್ತವವಾಗಿ ಇದು ಹಲವು ಅಧಿಕಾರಿಗಳಿಗೆ ಕಣ್ಣು ಕೆಂಪಾಗಿಸಿದ ವಿಷಯ. ವೀರೇಶ್‌ರ ಅರ್ಜಿಯೊಂದು ಕರ್ನಾಟಕ ಮಾಹಿತಿ ಆಯೋಗದ ಎದುರು ವಿಚಾರಣೆಗೆ ಬಂದಾಗ ಎದುರಿಯ ವಕೀಲರು ವೀರೇಶ್‌ರ ವ್ಯಕ್ತಿತ್ವವನ್ನು ಶಂಕಿಸತೊಡಗಿದರು. ಆ ವಕೀಲರ ಪ್ರಕಾರ ಆಯೋಗದ ಮುಂದೆ ಅರ್ಜಿ ಸಲ್ಲಿಸುವವರು ಸ್ವಚ್ಛ ಕೈಯವರಾಗಿರಬೇಕು! ಕೊನೆಗೂ ಮಧ್ಯ ಪ್ರವೇಶಿಸಿದ ಮುಖ್ಯ ಆಯುಕ್ತರು ಗದರಿಸಿದ ಮೇಲೆ ವಕೀಲರು ತಮ್ಮ ವಾದವನ್ನು ಹಿಂದೆ ಪಡೆದರು.

ಇಂತದ್ದೇ ಬೈಗುಳ ಅಸ್ಸಾಂನಿಂದಲೂ ಕೇಳಬಂದಿದೆ. ಅಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರ ಹಾಗೂ ನಿಧಿಗಳ ದುರುಪಯೋಗದ ಮಾಹಿತಿ ಕಲೆಹಾಕಿದ ಸಾರ್ವಜನಿಕ ಸಂಘಟನೆಯ ಮೇಲೆ ಜೀವಬೆದರಿಕೆ ಒಡ್ಡಲಾಯಿತು, ಥಳಿಸಲಾಯಿತು. ಇಂತಹ ಸಂಘಟನೆ ಮತ್ತು ಮಾಹಿತಿ ಕಾರ್ಯಕರ್ತರ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದೂ ಇದೆ.

ಅಮಾನವೀಯವಾಗಿ ಕೊಲೆಗೀಡಾದ ಪ್ರಾಮಾಣಿಕ ಅಧಿಕಾರಿಗಳಾದ ಸತ್ಯೇಂದ್ರ ದುಬೆ ಹಾಗೂ ಮಂಜುನಾಥ್‌ರ ಕುರಿತು ಪ್ರಚಾರ ಸಿಕ್ಕಿದ್ದು ಸರಿ. ಇದೇ ವೇಳೆ ಬೆದರಿಕೆ, ಹಲ್ಲೆ, ಧಾಳಿಗಳಿಗೆ ತುತ್ತಾದ ಮಾಹಿತಿ ಹಕ್ಕು ಕಾರ್ಯಕರ್ತರ ಘಟನೆಗಳು ಸುದ್ದಿಯೇ ಆಗದೆ ಹೋಗಿಬಿಡುತ್ತವೆ. ಬಹುಪಾಲು ಮಾಹಿತಿ ಹೋರಾಟಗಾರರು ಏಕಾಂಗಿಗಳು. ಯಾವುದೇ ಪರಿಣಾಮಕ್ಕೂ ಬೆದರದೆ ಮುನ್ನುಗ್ಗುತ್ತಿರುವವರು. ಈಗ ಹೇಳಿ, ಈ ಮಾಹಿತಿ ಹಕ್ಕು ಕಾಯ್ದೆ ಸೈನಿಕರ ರಕ್ಷಣೆಗೆ ಏನಾದರೂ ಮಾಡಬೇಡವೇ? ಕೊನೆಗೆ ರಕ್ಷಣೆಗೆ ಆರ್‌ಟಿಐಎಗೆ ತಿದ್ದುಪಡಿ ತರಬಹುದಲ್ಲವೇ?

## ಆಡಳಿತ ವಿಷಯಗಳು

### ಕರಾರು ಕೂಲಿ- ಕೇಂದ್ರ ವೆಚ್ಚ



ಭಾರತ ಸರ್ಕಾರ ಕರಾರು ಕೂಲಿಗಳನ್ನು ಗುರುತಿಸುವ ಮತ್ತು ಅವರ ಪುನರ್ವಸತಿಗೆ ಯೋಜನೆ ಯನ್ನು ಜಾರಿಗೊಳಿಸಿತ್ತು. ಈ ಕೇಂದ್ರ ಪ್ರಾಯೋಜಿತ ಯೋಜನೆ ಯಡಿ ಹಲವು ರಾಜ್ಯ ಗಳು ಆರ್ಥಿಕ ಸಹಾಯ ಪಡೆದವು. 2004–05ರಲ್ಲಿ ಕರಾರು ಕೂಲಿಗಳನ್ನು ಗುರುತಿಸಿದ ಹಾಗೂ ಪುನರ್ವಸತಿ ಕಲ್ಪಿಸಿದ ವಿವರ ಕೆಳಗಿನಂತಿದೆ.

ರಾಜ್ಯಗಳು ಗುರುತಿಸಿದ ಹಾಗೂ ಪುನರ್ವಸತಿ ಕಲ್ಪಿಸಿದ ಕೂಲಿಗಳು ಖರ್ಚು ಮಾಡಿದ ಮೊತ್ತ ರೂ/ಲಕ್ಷಗಳಲ್ಲಿ

| | | |
|---|---|---|
| ಬಿಹಾರ್ | 281 | 28.10 |
| ಜಾರ್ಖಂಡ್ | 196 | 19.60 |
| ಕರ್ನಾಟಕ | 64 | 6.40 |
| ಮಧ್ಯಪ್ರದೇಶ | 265 | 16.91 |
| ಒರಿಸ್ಸಾ | 19 | 1.90 |
| ಉತ್ತರಪ್ರದೇಶ | 41 | 4.05 |

[ಪಾರ್ಲಿಮೆಂಟ್ ಡೈಜೆಸ್ಟ್, ಎನ್‌ಎಸಿಎಸ್]

## ಮಹಾರಾಷ್ಟ್ರದಲ್ಲಿ ಆರ್‌ಟಿಐ ಜಾಗೃತಿ

**ಲ**ಭ್ಯವಿರುವ ವರದಿಗಳ ಪ್ರಕಾರ 2006ರಲ್ಲಿ ಮಹಾರಾಷ್ಟ್ರದಲ್ಲಿ ಸಾರ್ವಜನಿಕ ಪ್ರಾಧಿಕಾರಗಳು ಅತ್ಯಧಿಕ ಸಂಖ್ಯೆಯ ಮಾಹಿತಿ ಕೇಳಿದ ಅರ್ಜಿ ಸ್ವೀಕರಿಸಿವೆ. ಬಂದ ಒಟ್ಟು 1.24 ಲಕ್ಷ ಆರ್‌ಟಿಐ ಅರ್ಜಿಗಳಲ್ಲಿ 1.13 ಲಕ್ಷ ಅರ್ಜಿಗಳು ಇತ್ಯರ್ಥಗೊಂಡವು. ಅತಿ ಹೆಚ್ಚಿನ ಅರ್ಜಿಗಳು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಕೆಯಾಗಿದ್ದರೆ, ನಂತರದ ಸ್ಥಾನಗಳಲ್ಲಿ ಕಂದಾಯ, ಗ್ರಾಮೀಣ ಅಭಿವೃದ್ಧಿ ಪ್ರಾಧಿಕಾರಗಳಿದ್ದವು.

### ಚುನಾವಣೆ ಖರ್ಚು!

ಒಂದು ಸಾರ್ವತ್ರಿಕ ಚುನಾವಣೆಗೆ ಆಗುವ ಸರ್ಕಾರಿ ಖರ್ಚಿನ ಬಗ್ಗೆ ನಿಮಗೆ ಮಾಹಿತಿ ಇದೆಯೇ? 2004ರಲ್ಲಿ 14ನೇ ಲೋಕಸಭೆ ರೂಪುಗೊಳ್ಳಲು ಜರುಗಿದ ಸಾರ್ವತ್ರಿಕ ಚುನಾವಣೆಗೆ ತಗುಲಿದ ಸರ್ಕಾರಿ ವೆಚ್ಚ ಸುಮಾರು 1094 ಕೋಟಿ ರೂಪಾಯಿ! ಇದು ಹಿಂದಿನಲೋಕಸಭಾ ಚುನಾವಣೆಗಳಿಗೆ ವೆಚ್ಚವಾದುದಕ್ಕಿಂತ 145ಕೋಟಿ ಗಳಷ್ಟು




ಹೆಚ್ಚಿನ ಖರ್ಚು.ಈ ಮಾಹಿತಿಯನ್ನು ಲೋಕ ಸಭೆಯಲ್ಲಿ ಕಾನೂನು ಸಚಿವರು ಅಂಕಿಅಂಶ ಸಮೇತ ಮಂಡಿಸಿದರು. ನೆನಪಿಡಬೇಕಾದ ಅಂಶವೆಂದರೆ ಚುನಾವಣೆಗೆ ಸರ್ಕಾರ ಮಾಡುವ ವೆಚ್ಚ ಪರೋಕ್ಷವಾಗಿ ನಾಗರಿಕರ ಜೇಬಿನಿಂದ ಭರಿಸುವಂತದು.

**[ಪಾರ್ಲಿಮೆಂಟ್ ಡೈಜೆಸ್ಟ್, ಎನ್‌ಎಸಿಎಸ್]**

## ಮಾಹಿತಿ ಕಾಯ್ದೆ ವ್ಯಾಪ್ತಿಗೆ ವಿಶ್ವವಿದ್ಯಾಲಯಗಳು

**ವಿ**ಶ್ವವಿದ್ಯಾಲಯಗಳೂ ಮಾಹಿತಿ ಹಕ್ಕು ಕಾಯ್ದೆ 2005ರ ಅನ್ವಯ ತಂದಿರುವ ನಿಯಮಗಳನ್ನು ಪಾಲಿಸಬೇಕಾಗುತ್ತವೆ ಎಂದು ಕರ್ನಾಟಕದ ಮುಖ್ಯ ನ್ಯಾಯಾಲಯ ತೀರ್ಪು ನೀಡಿದೆ. ಈ ಕಾಯ್ದೆಯ ಅಡಿಯಲ್ಲಿ ಶ್ರೀ ಶಿವಣ್ಣ ನಾಯಕ್ ಎಂಬುವವರು ಬೆಂಗಳೂರು ವಿವಿಯಲ್ಲಿ ನಡೆದ ಕಾನೂನು ಉಪನ್ಯಾಸಕರ ಹುದ್ದೆಗೆ ತಮ್ಮನ್ನು ಆಯ್ಕೆ ಮಾಡದಿರುವ ಕುರಿತು ಮಾಹಿತಿ ಕೋರಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ನಿಯಮ ಪ್ರಕಾರ ಮಾಹಿತಿ ಕೊಡಲು ನಿರಾಕರಿಸಲಾಯಿತು. ಇದರ ವಿರುದ್ಧ ಶ್ರೀ ನಾಯಕ್ ಕರ್ನಾಟಕ ಹೈಕೋರ್ಟ್‌ನ ಮೊರೆ ಹೋದರು. ಮನವಿಯನ್ನು ಮನ್ನಿಸಿದ ಜಸ್ಟೀಸ್ ಕೆ.ಎಲ್.ಮಂಜುನಾಥ್ ವಿವಿಗೆ ನಾಯಕ್‌ರ ಅರ್ಜಿಯನ್ನು ಪರಿಗಣಿಸುವಂತೆ ಆದೇಶಿಸಿದರು. ವಿವಿ ಸಂವಿಧಾನದ 12ನೇ ಕಲಂ ಅಡಿ ಬರುವುದರಿಂದ ಮೂಲಭೂತ ಹಕ್ಕುಗಳ ನಿಯಮವಾಗಿಯೂ ಇದನ್ನು ಪರಿಗಣಿಸಬೇಕಾಗುತ್ತದೆ ಎಂದೂ ಹೈಕೋರ್ಟ್ ಅಭಿಪ್ರಾಯಪಟ್ಟಿತು.

## ಪಾಸ್‌ಪೋರ್ಟ್ ಅಧಿಕಾರಿಗೆ ದಂಡ




**ಪಾ**ಸ್‌ಪೋರ್ಟ್ ಆಕಾಂಕ್ಷಿಗೆ ಮಾಹಿತಿ ನೀಡಲು ವಿಳಂಬಿಸಿದ ದೆಹಲಿಯ ಪಾಸ್‌ಪೋರ್ಟ್ ಅಧಿಕಾರಿಗೆ ಕೇಂದ್ರ ಮಾಹಿತಿ ಆಯೋಗ 16 ಸಾವಿರ ರೂಪಾಯಿಗಳ ದಂಡ ವಿಧಿಸಿದೆ. ನವದೆಹಲಿಯ ಜೋರ್ಬಾಗ್ ನಿವಾಸಿ, 90 ವರ್ಷಗಳ ಕೃಷ್ಣಾ ದೇವಿ ಜಲಾನಿ ತಮ್ಮ ಪಾಸ್‌ಪೋರ್ಟ್‌ನ ನವೀಕರಣಕ್ಕೆ ಅರ್ಜಿ ಸಲ್ಲಿಸಿದ್ದರು. ಅದಕ್ಕೆ ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿಯಿಂದ ಮೂರು ತಿಂಗಳು ಕಳೆದರೂ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಹೀಗಾಗಿ ಆಕೆ ಮಾಹಿತಿ ಹಕ್ಕು ಕಾಯ್ದೆಯಡಿ ತಮ್ಮ ಅರ್ಜಿಯ ಕತೆ ಏನಾಗಿದೆಯೆಂದು ಕೇಳಿದ್ದರು.

ಇದಕ್ಕೂ ಯಾವುದೇ ಉತ್ತರ ಬಾರದಿದ್ದುದರಿಂದ ಅನಿವಾರ್ಯವಾಗಿ ಸಿಐಸಿಯಲ್ಲಿ ದೂರು ದಾಖಲಿಸಿದ್ದರು. ಪಾಸ್‌ಪೋರ್ಟ್ ಅಧಿಕಾರಿ ಸಿಐಸಿಯ ನೋಟೀಸ್‌ಗೂ ಪ್ರತಿಕ್ರಿಯಿಸಿರಲಿಲ್ಲ. ಮಾಹಿತಿ ಆಯುಕ್ತರಾದ ಶ್ರೀ ಕೆಜರೀವಾಲ್ ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಅಧಿಕಾರಿಯ ವಿರುದ್ಧ ಉಗ್ರ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದರು.

## ಮಾಹಿತಿ ಕಾಯ್ದೆ- ಕಾರ್ಯಾಚರಣೆಗೆ ಹೆಜ್ಜೆಗಳು

**ಮಾ**ಹಿತಿ ಹಕ್ಕು ಕಾಯ್ದೆಯ ಪರಿಣಾಮಕಾರಿ ಜಾರಿಯ ಅಗತ್ಯವಿದೆ. ಇದು ಕೇಂದ್ರ ಸರ್ಕಾರದ ಉದ್ಯೋಗಿ ತರಬೇತಿ ವಿಭಾಗಕ್ಕೂ ಗೊತ್ತು. ಅದು ಇತ್ತೀಚೆಗೆ ಎಲ್ಲ ಸಚಿವಾಲಯ ಹಾಗೂ ವಿಭಾಗಗಳಿಗೆ ಸುತ್ತೋಲೆ ಕಳುಹಿಸಿ, ಆರ್‌ಟಿಐನ ಸಮರ್ಪಕ ಜಾರಿಗೆ ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಸೂಚಿಸಿದೆ. ಸಾರ್ವಜನಿಕರಿಂದ ಬಂದ ದೂರುಗಳ ಹಿನ್ನೆಲೆಯಲ್ಲಿ ಸಿಐಸಿ ನೀಡಿದ ಸಲಹೆಗಳನ್ನು ಆಧರಿಸಿದೆ. ಸುತ್ತೋಲೆಯ ಮುಖ್ಯಾಂಶಗಳು ಈ ಕೆಳಗಿನಂತಿವೆ.

* ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ಸಹಾಯಕ ಸಿಐಒಗಳು ಮತ್ತು ಮೇಲ್ಮನವಿ ಪ್ರಾಧಿಕಾರ ಎಲ್ಲ ಸಾರ್ವಜನಿಕ ಇಲಾಖೆಗಳಲ್ಲಿ ಇರಬೇಕು.

* ಕಾಯ್ದೆಯ ಜಾರಿಗೆ ನೇಮಿಸಲಾದ ನೋಡಲ್ ಅಧಿಕಾರಿಯ ವಿವರ, ಅಲ್ಲದೆ ಪಿಐಒ, ಎಪಿಐಒ ಮತ್ತು ಮೇಲ್ಮನವಿ ಪ್ರಾಧಿಕಾರಗಳ ಸಂಪರ್ಕ ವಿಳಾಸ, ದೂರವಾಣಿ ಸಂಖ್ಯೆ, ಈ- ಮೇಲ್ ವಿಳಾಸ ಹಾಗೂ ಫ್ಯಾಕ್ಸ್ ನಂಬರ್‌ಗಳನ್ನು ಕೇಂದ್ರ ಮಾಹಿತಿ ಆಯೋಗಕ್ಕೆ ಸಲ್ಲಿಸಬೇಕು.

* ಮಾಹಿತಿ ಪಡೆಯಲು ಶುಲ್ಕ ತುಂಬಬೇಕಲ್ಲವೇ? ಹಾಗಾಗಿ ಸಾರ್ವಜನಿಕ ಪ್ರಾಧಿಕಾರವು ತಾನು ಹೊಂದಿದ ಬ್ಯಾಂಕ್ ಖಾತೆಯ ಸಂಖ್ಯೆ, ಬ್ಯಾಂಕ್ ವಿವರಗಳಿಗೆ ಮುದ್ರಣ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಪ್ರಚಾರ ಕೊಡಬೇಕು. ಈ ಮಾಹಿತಿಯನ್ನು ಸಿಐಸಿಗೂ ಒದಗಿಸಬೇಕು.

* ಕೆಲವು ಸಚಿವಾಲಯ, ಇಲಾಖೆಗಳು ವಿಭಿನ್ನ ಕ್ಷೇತ್ರಕ್ಕೆ ಪ್ರಪ್ರತ್ಯೇಕ ಪಿಐಒಗಳನ್ನು ನೇಮಿಸಿರುತ್ತವೆ. ಇಂತಹ ಸಂದರ್ಭಗಳಲ್ಲಿ ಸಂಬಂಧಿಸಿದವರು ಪಿಐಒಗಳಿಗೆ ಯಾವುದೇ ಕ್ಷೇತ್ರದ ಅರ್ಜಿಯನ್ನೂ ಸ್ವೀಕರಿಸಬೇಕು ಎಂಬ ಸೂಚನೆ ನೀಡಬೇಕು. ಸಂಬಂಧಿತ ಪಿಐಒಗೆ ಅರ್ಜಿಯನ್ನು ತಲುಪಿಸುವುದೂ ಇವರದೇ ಕೆಲಸ. ಈ ಮಾಹಿತಿಯನ್ನೂ ಅರ್ಜಿದಾರನಿಗೂ ಒದಗಿಸಬೇಕು.

* ಸಾದಾಕಾಗದದ ಮೇಲೆ ಬರೆದುಕೊಟ್ಟ ಮಾಹಿತಿ ಅರ್ಜಿ ಕೂಡ ಸ್ವೀಕಾರಾರ್ಹ. ಇವಕ್ಕೂ ಸಮಯಮಿತಿಯಲ್ಲಿ ಉತ್ತರಿಸಲೇಬೇಕು.

* ಮಾಹಿತಿ ಹಕ್ಕು ಕಾಯ್ದೆಯನ್ವಯ, ಮಾಹಿತಿ ಕೇಳುವ ವ್ಯಕ್ತಿ ತನ್ನ ಅರ್ಜಿಯಲ್ಲಿ ಕಾರಣಗಳನ್ನು ನಮೂದಿಸಬೇಕಾಗಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲ ಸಚಿವಾಲಯ, ಇಲಾಖೆ, ಸಾರ್ವಜನಿಕ ಪ್ರಾಧಿಕಾರಗಳು ತಮ್ಮ ಅಧಿಕಾರಿಗಳಿಗೆ ಅಗತ್ಯ ಆದೇಶ ಹೊರಡಿಸಿ ಅರ್ಜಿದಾರರಿಗೆ ಅನವಶ್ಯಕ ಪ್ರಶ್ನೆಗಳಿಂದ ಕಿರುಕುಳ ನೀಡದಂತೆ ಎಚ್ಚರಿಕೆ ನೀಡಬೇಕು.

**[ಮೂಲ : ಡಿಪಿಟಿ.ಒ.ಎಮ್.ನಂ.1/4/2006-ಐಆರ್ ದಿನಾಂಕ 21.2.2006]**

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:

CREAT BANGALORE

# ಗ್ರಾಹಕರ ಹಕ್ಕು ಶಿಕ್ಷಣ ಮತ್ತು ಜಾಗೃತಿ ವೇದಿಕೆ

ನಂ.239,5ನೇ 'ಸಿ' ಮುಖ್ಯರಸ್ತೆ,ರೆಮ್ಕೊ ಲೇಔಟ್,ಹಂಪಿನಗರ,ಬೆಂಗಳೂರು-560 104

ದೂರವಾಣಿ:91-080-23357280,E.mail : creatorg@sify.com , Website : www.creatindia.org